## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 79/2021

**ಸಾಕ್ಷಿಯನ್ನು ದಿಃ 21.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ರಮೇಶ | ಪಿಡಬ್ಲ್ಯೂ:1 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 55 ವರ್ಷ | |
| ಕೆಲಸ | ಎ.ಎಸ್.ಐ, ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಹುಣಸೂರು ಪಟ್ಟಣ | |

**ಸಿ.ಆರ್.ಪಿ.ಸಿ ಕಲಂ 299 ರ ಅಡಿ ವಿಚಾರಣೆಃ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 28.08.2022 ರಿಂದ ಇಲ್ಲಿಯವರೆಗೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಆರೋಪಿಯಾದ ಶಾಬುದ್ದೀನ್ ಎಂಬುವವರಿಗೆ ಪ್ರೋಕ್ಲಮೇಷನ್ ವಾರೆಂಟ್ ಜಾರಿ ಮಾಡಲು ನ್ಯಾಯಾಲಯದಿಂದ ಹೊರಡಿಸಿದ್ದ ಪ್ರೋಕ್ಲಮೇಷನ್ ವಾರೆಂಟ್ ನ್ನು ಸ್ವೀಕರಿಸಿ ಅದನ್ನು ಹೊರಡಿಸಲು ನನ್ನನ್ನು ಕರ್ತವ್ಯಕ್ಕೆ ನೇಮಿಸಿದ್ದ ಮೇರೆಗೆ ಸದರಿ ವಾರೆಂಟ್ ಅನ್ನು ಪಡೆದುಕೊಂಡು ದಿಃ 23.01.2024 ರಂದು ಆರೋಪಿಯ ವಿಳಾಸವಾದ ಮೈಸೂರು ಜಿಲ್ಲೆ, ಹುಣಸೂರು ಪಟ್ಟಣ, ಮುಸ್ಲಿಂ ಬ್ಲಾಕ್ ನಲ್ಲಿರುವ ಮನೆ ನಂಬರ್ 1551 ಕ್ಕೆ ಹೋಗಿ ವಿಚಾರಿಸಲಾಗಿ ಸದರಿ ಆರೋಪಿಯು ಈಗ್ಗೆ ಎರಡು ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದು ಇದುವರೆಗೂ ಹಿಂದಿರುಗಿ ಬಂದಿಲ್ಲ ಎಂದು ಸ್ಥಳೀಯರು ಮಾಹಿತಿ ನೀಡಿದರು. ಆತ ಪತ್ತೆಯಾದಲ್ಲಿ ಹತ್ತಿರದ ಠಾಣೆಗೆ ಅಥವಾ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಿದೆನು. ಈ ಬಗ್ಗೆ ಸ್ಥಳದಲ್ಲಿ ಅಬ್ದುಲ್ ರಫಿ ಬಿನ್ ಅಬ್ದುಲ್ ರಜಾಕ್ ಹಾಗೂ ಸನಾಉಲ್ಲಾ ಬಿನ್

ಅಬ್ದುಲ್ ಬೇಗ್ ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಈ ಬಗ್ಗೆ ಸ್ಥಳದಲ್ಲಿ ಟಾಂ ಟಾಂ ಮಾಡಿಸಿ ಪ್ರೋಕ್ಲಮೇಷನ್ ವಾರೆಂಟ್ ಅನ್ನು ಆರೋಪಿ ವಾಸಯಿದ್ದ ಮನೆಯ ಬಾಗಿಲಿನ ಮೇಲೆ, ನಗರ ಸಭೆಯ ಸೂಚನಾ ಫಲಕಕ್ಕೆ ಮತ್ತು ನ್ಯಾಯಾಲಯದ ಸೂಚನಾ ಫಲಕಕ್ಕೆ ಅಂಟಿಸಿರುತ್ತೇನೆ. ನಂತರ ಆರೋಪಿಯ ಬಾಬ್ತು ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ಹುಣಸೂರು ನಗರ ಸಭೆಗೆ ಮನವಿ ಸಲ್ಲಿಸಿರುತ್ತೇನೆ. ಅದಕ್ಕೆ ಪ್ರತಿಯಾಗಿ ಪೌರಾಯುಕ್ತರು ನಗರ ಸಭೆ ಹುಣಸೂರು ರವರು ವರದಿಯನ್ನು ನೀಡಿ ಆರೋಪಿಯ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ದಾಖಲೆಗಳನ್ನು ನನ್ನ ವರದಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನಗೆ ನೀಡಿದ್ದ ಪ್ರೋಕ್ಲಮೇಷನ್ ವಾರೆಂಟ್ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ. 1 ಎಂದು, ಪ್ರೋಕ್ಲಮೇಷನ್ ವಾರೆಂಟ್ ಹೊರಡಿಸಿದ ಬಗ್ಗೆ ಮಾಡಿರುವ ಮಹಜರ್ ನ್ನು ನಿಪಿ. 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು, ಒಂದು ಭಾವಚಿತ್ರವನ್ನು ನಿಪಿ 3 ಎಂದು, ನಾನು ಸಲ್ಲಿಸಿದ ವರದಿಯನ್ನು ನಿಪಿ 4 ಎಂದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು, ಹುಣಸೂರು ನಗರ ಸಭೆಯವರು ನೀಡಿದ ವರದಿಯನ್ನು ನಿಪಿ 5 ಎಂದು ಹಾಗೂ ಆ ಬಗ್ಗೆ ಸಲ್ಲಿಸಿದ ನನ್ನ ನಿವೇದನೆಯನ್ನು ನಿಪಿ 6 ಎಂದು, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಇಲ್ಲ</u>**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.